# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 730 (763) |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 10-03-2026 |

*****

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಕಲಬುರಗಿಯ ಜಿಲ್ಲೆಯ ಹೊನ್ನಕಿರಣಗಿ ಮತ್ತು ನದಿಸಿನ್ನೂರು ಗ್ರಾಮಗಳಲ್ಲಿ ನಿರ್ಮಿಸಲು ಉದ್ದೇಶಿಸಿರುವ ಪಿಎಂ ಮಿತ್ರ ಮೆಗಾ ಜವಳಿ ಪಾರ್ಕ್ ಯೋಜನೆ ಕಾಮಗಾರಿಯು ಯಾವ ಹಂತದಲ್ಲಿದೆ; ಯೋಜನೆ ಪೂರ್ಣಗೊಳಿಸಲು ನಿರ್ದಿಷ್ಟಪಡಿಸಿದ ಅವಧಿ ಎಷ್ಟು; | ರಾಜ್ಯ ಸರ್ಕಾರದಿಂದ ಸದರಿ ಪಾರ್ಕ್‌ನ ಗೇಟ್‌ನವರೆಗೆ ಅಭಿವೃದ್ಧಿಪಡಿಸಲು ಮೂಲಭೂತ ಸೌಕರ್ಯಗಳಾದ ರಸ್ತೆ, ಚರಂಡಿ, ಪವರ್ ಸ್ಟೇಷನ್, ನೀರು (ಬ್ಯಾರೇಜ್ ನಿರ್ಮಾಣ ಮತ್ತು ಪೈಪ್‌ಲೈನ್) ಕಾಮಗಾರಿಗಳಿಗಾಗಿ ರೂ.390.26 ಕೋಟಿಗಳನ್ನು ದಿನಾಂಕ: 17-09-2024 ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಅನುಮೋದಿಸಿ, ಮಂಜೂರಾತಿಯನ್ನು ಸರ್ಕಾರದ ಆದೇಶ ಸಂಖ್ಯೆ:CI 170 JAKE 2019 (P-5), ದಿನಾಂಕ:03.10.2024 ರಲ್ಲಿ ನೀಡಿದೆ. ಕಾಮಗಾರಿಯ ವಿವರವನ್ನು **ಅನುಬಂಧ-1** ರಲ್ಲಿ ಒದಗಿಸಿದೆ.<br><br>ದಿನಾಂಕ:27.10.2025 ರಂದು ಯೋಜನೆಗೆ ಪರಿಸರ ವಿಮೋಚನಾ ಪತ್ರವನ್ನು (Environmental Clearance) ಪಡೆಯಲಾಗಿರುತ್ತದೆ.<br><br>ಯೋಜನೆಯನ್ನು ಕೇಂದ್ರ ಸರ್ಕಾರದ PPPAC (Public-Private Partnership Appraisal Committee) ಯ ಅನುಮೋದನೆಗೆ ಮಂಡಿಸಲಾಗಿದೆ.<br><br>ಪ್ರಸ್ತುತ, ದಿನಾಂಕ:03.02.2026 ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯ ತೀರ್ಮಾನದಂತೆ PM-MITRA Park ಅನ್ನು ರಾಜ್ಯದ KIADB ಮೂಲಕ ಮೂಲಸೌಲಭ್ಯ ಅಭಿವೃದ್ಧಿಯ ಸಾಧ್ಯತಾ ಕುರಿತು ಪರಿಶೀಲನೆಯಲ್ಲಿದೆ.<br><br>ದಿನಾಂಕ:28.03.2023 ರಂದು ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರದ ನಡುವೆ ಮಾಡಿಕೊಂಡ ಒಡಂಬಡಿಕೆರನ್ವಯ ಪಾರ್ಕ್‌ನ್ನು ಅನುಷ್ಠಾನಗೊಳಿಸಲು 2027-28 ರ ಅವಧಿಯವರೆಗೆ ನಿರ್ದಿಷ್ಟ ಪಡಿಸಲಾಗಿರುತ್ತದೆ. |
| (ಆ) | ಈ ಯೋಜನೆಗೆ ಮೀಸಲಿರಿಸಿದ ಒಟ್ಟು ಅನುದಾನವೆಷ್ಟು; (ಇದರಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಪಾಲುದಾರಿಕೆಯ ವಿವರ ನೀಡುವುದು): | ರಾಜ್ಯ ಸರ್ಕಾರದಿಂದ ಸದರಿ ಪಾರ್ಕ್‌ನ ಗೇಟ್‌ನವರೆಗೆ ಅಭಿವೃದ್ಧಿಪಡಿಸಲು ಮೂಲಭೂತ ಸೌಕರ್ಯಗಳಾದ ರಸ್ತೆ, ಚರಂಡಿ, ಪವರ್ ಸ್ಟೇಷನ್, ಬ್ಯಾರೇಜ್ ನಿರ್ಮಾಣ ಮತ್ತು ಪೈಪ್‌ಲೈನ್ ಕಾಮಗಾರಿಗಳಿಗಾಗಿ ರೂ.390.26 ಕೋಟಿಗಳನ್ನು ದಿನಾಂಕ:17-09-2024 ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಅನುಮೋದಿಸಿ, ಮಂಜೂರಾತಿಯನ್ನು ಸರ್ಕಾರದ ಆದೇಶ ದಿನಾಂಕ:03.10.2024 ರಲ್ಲಿ ನೀಡಿದೆ. |

..2

| | | |
|---|---|---|
| (ಇ) | ಈ ಕೈಗಾರಿಕಾ ಯೋಜನೆಯಲ್ಲಿ ಯಾವ ಯಾವ ಕಂಪನಿಗಳಿಗೆ ಪಾರ್ಕ್ ನಿರ್ಮಿಸಲು ಅನುಮೋದನೆ ನೀಡಲಾಗಿದೆ; ಹಾಗೂ ಕಂಪನಿಗಳ ತಲಾ ಹೂಡಿಕೆಯ ವಿವರವನ್ನು ನೀಡುವುದು: | ದಿನಾಂಕ:28.03.2023 ರಂದು ರಾಜ್ಯ ಸರ್ಕಾರ ಹಾಗೂ ಜವಳಿ ಘಟಕಗಳ ನಡುವೆ PM-MITRA Park, Kalaburagi launch event ನಲ್ಲಿ ಒಟ್ಟು ರೂ.1700.00 **ಕೋಟಿಗಳಿಗೆ** MOUಅನ್ನು ಸಹಿ ಮಾಡಲಾಗಿರುತ್ತದೆ. ವಿವರವನ್ನು **ಅನುಬಂಧ-2** ರಲ್ಲಿ ಒದಗಿಸಿದೆ. |
| (ಈ) | ಪಾರ್ಕ್ ನಿರ್ಮಾಣ ಯೋಜನೆಗೆ ಖರೀದಿಸಿದ ಒಟ್ಟು ಜಮೀನಿನ ವಿಸ್ತೀರ್ಣ ಎಷ್ಟು; ಈ ಜಮೀನಿನ ಮಾಲಿಕರು/ ರೈತರಿಗೆ ಸರ್ಕಾರ ನಿಗದಿಪಡಿಸಿದ ಸಹಾಯಧನದ ಮೊತ್ತವೆಷ್ಟು; ಇಲ್ಲಿಯವರೆಗೆ ಎಷ್ಟು ಜನರಿಗೆ ಸಹಾಯಧನವನ್ನು ನೀಡಲಾಗಿದೆ; ಪ್ರಸ್ತುತ ಎಷ್ಟು ಜನ ಜಮೀನು ಮಾಲೀಕರಿಗೆ ಇನ್ನು ಸಹಾಯಧನ ಪಾವತಿಸಲು ಬಾಕಿ ಉಳಿದಿದೆ; ಹಾಗೂ ಯಾವ ಕಾಲಮಿತಿ ಯಲ್ಲಿ ಬಾಕಿ ಸಹಾಯಧನವನ್ನು ನೀಡಲಾಗುತ್ತದೆ; (ರೈತರ ವಿವರಗಳ ಸಮೇತ ಸಂಪೂರ್ಣ ಮಾಹಿತಿಯನ್ನು ನೀಡುವುದು.) | ಕಲಬುರಗಿ ಜಿಲ್ಲೆಯ ಕಲಬುರಗಿ ತಾಲ್ಲೂಕಿನ ನದಿಸಿನ್ನೂರು, ಫಿರೋಜಾಬಾದ್ ಹಾಗೂ ಕಿರಣಗಿ ಗ್ರಾಮಗಳ ವ್ಯಾಪ್ತಿಯಲ್ಲಿ ರಾಜ್ಯ ಸರ್ಕಾರಿ ಸ್ವಾಮ್ಯದ Power Company of Karnataka Limited (PCKL) ಅಧೀನದಲ್ಲಿರುವ 1000 ಎಕರೆ ಜಮೀನನ್ನು PM-MITRA ಯೋಜನೆಯಡಿ ಜವಳಿ ಪಾರ್ಕ್ ಸ್ಥಾಪಿಸಲು, ಇಂಧನ ಇಲಾಖೆಯ ಆದೇಶ ಸಂಖ್ಯೆ: ಎನರ್ಜಿ 210 ಇಇಬಿ 2022, ದಿನಾಂಕ:27.05.2024 ರಲ್ಲಿ ಹಸ್ತಾಂತರಿಸಲು ಆದೇಶಿಸಿ, ಕೈಮಗ್ಗ ಮತ್ತು ಜವಳಿ ಇಲಾಖೆಗೆ ವರ್ಗಾಯಿಸಲಾಗಿದೆ. ಮುಂದುವರೆದು, ದಿನಾಂಕ:22.10.2024 ರಂದು ಜವಳಿ ಇಲಾಖೆಯಿಂದ ಎಸ್.ಪಿ.ವಿ ಹೆಸರಿಗೆ ವರ್ಗಾಯಿಸಲಾಗಿದೆ. |
| (ಉ) | ಸದರಿ ಜವಳಿ ಪಾರ್ಕ್ ನಲ್ಲಿ ಸೃಷ್ಟಿಯಾಗುವ ಉದ್ಯೋಗಗಳು ಎಷ್ಟು, ಈ ಉದ್ಯೋಗ ಹಂಚಿಕೆಯಲ್ಲಿ ಡಾ. ಸರೋಜಿನಿ ಮಹಿಷಿ ವರದಿ ಯನ್ವಯ ಉದ್ಯೋಗಗಳನ್ನು ಹಂಚಿಕೆ ಮಾಡಲಾಗುತ್ತದೆಯೇ; ಇದರಲ್ಲಿ ಸ್ಥಳೀಯ ನಿವಾಸಿಗಳು ಹಾಗೂ ಕರ್ನಾಟಕದ ಇತರೆ ಭಾಗದ ಎಷ್ಟು ಜನರಿಗೆ ಉದ್ಯೋಗವನ್ನು ನೀಡಲು ಸರ್ಕಾರ ಉದ್ದೇಶಿಸಿದೆ? (ಮಾಹಿತಿ ನೀಡುವುದು): | 2024-25ನೇ ಸಾಲಿನ ಆಯವ್ಯಯ ಘೋಷಣೆ ಕಂಡಿಕೆ-329 ರಲ್ಲಿ **"ರಾಜ್ಯ ಹಾಗೂ ಕೇಂದ್ರ ಸರ್ಕಾರದ ಸಹಭಾಗಿತ್ವದಲ್ಲಿ ಕಲಬುರಗಿ ಜಿಲ್ಲೆಯ 1,000 ಎಕರೆ ಪ್ರದೇಶದಲ್ಲಿ ಪಿ.ಪಿ.ಪಿ ಮಾದರಿಯಲ್ಲಿ ಮೆಗಾ ಜವಳಿ ಪಾರ್ಕ್‌ನ್ನು ಸ್ಥಾಪಿಸಲಾಗುತ್ತಿದೆ. ಇದರಿಂದ 1 ಲಕ್ಷ ಜನರಿಗೆ ನೇರ ಉದ್ಯೋಗ ಹಾಗೂ 2 ಲಕ್ಷ ಜನರಿಗೆ ಪರೋಕ್ಷ ಉದ್ಯೋಗ ಸೃಜನೆಯಾಗುವ ನಿರೀಕ್ಷೆಯಿದೆ"** ಎಂದು ಘೋಷಣೆಯಾಗಿರುತ್ತದೆ.<br><br>ಜವಳಿ ಪಾರ್ಕ್ ಸ್ಥಾಪನೆಯಾದ ನಂತರ, 1 ಲಕ್ಷ ಜನರಿಗೆ ನೇರ ಉದ್ಯೋಗ ಹಾಗೂ 2 ಲಕ್ಷ ಜನರಿಗೆ ಪರೋಕ್ಷ ಉದ್ಯೋಗ ನೀಡಲು ನಿರೀಕ್ಷಿಸಲಾಗಿದೆ. ಉದ್ಯೋಗ ನೀಡುವ ಸಮಯದಲ್ಲಿ, ಸ್ಥಳೀಯ ನಿವಾಸಿಗಳು ಹಾಗೂ ಕರ್ನಾಟಕದ ಇತರೆ ಭಾಗದ ಜನರಿಗೆ ಡಾ. ಸರೋಜಿನಿ ಮಹಿಷಿ ವರದಿಯನ್ವಯ ಹಂಚಿಕೆ ಮಾಡಲು ಕ್ರಮವಹಿಸಲಾಗುವುದು. |

**ಸಂಖ್ಯೆ: CI 51 JAKE 2026**

**(ಶಿವಾನಂದ ಎಸ್. ಪಾಟೀಲ)**
**ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು**

# ಅನುಬಂಧ-1

## ಪಿ.ಎಮ್-ಮಿತ್ರ ಮೆಗಾ ಜವಳಿ ಪಾರ್ಕ್ ಕಲಬುರಗಿಗೆ ಸಂಬಂಧಿಸಿದ ಪ್ರಗತಿ ವಿವರ

(ರೂ.ಕೋಟಿಗಳಲ್ಲಿ)

| ಕ್ರ.ಸಂ | ಕಾಮಗಾರಿಯ ಹೆಸರು | ನಿಗಧಿಪಡಿಸಿದ ಅನುದಾನ | ಅನುಷ್ಠಾನ ಇಲಾಖೆ | ಪ್ರಗತಿ |
|---|---|---|---|---|
| 1 | ಪಿಎಂ ಮಿತ್ರ ಮೆಗಾ ಜವಳಿ ಪಾರ್ಕ್ ಯೋಜನಾ ಪ್ರದೇಶದಿಂದ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ:50 ಕ್ಕೆ ಸಂಪರ್ಕ ಕಲ್ಪಿಸುವ 1.43 ಕಿ.ಮೀ.ಉದ್ದದ ವಿಭಜಕದೊಂದಿಗೆ ಜೋಡಿ ರಸ್ತೆ ನಿರ್ಮಾಣ ಮಾಡುವುದು. | 9.98 | ಲೋಕೋಪಯೋಗಿ ಇಲಾಖೆ, ಕಲಬುರಗಿ ವಿಭಾಗ | 1. ಕಾರ್ಯ ನಿರ್ವಾಹಕ ಅಧಿಕಾರಿಗಳು ಲೋಕೋಪಯೋಗಿ ಇಲಾಖೆ, ಕಲಬುರಗಿ ಕಛೇರಿಯಿಂದ ಟೆಂಡರ್‌ನ್ನು ಅಂತಿಮಗೊಳಿಸಿ ದಿ:26-05-2025 ರಂದು ಕಾರ್ಯಾದೇಶ ನೀಡಲಾಗಿರುತ್ತದೆ.<br>2. ಭೂಮಿಯನ್ನು ಲೋಕೋಪಯೋಗಿ ಇಲಾಖೆ, ಕಲಬುರಗಿ ಇವರಿಗೆ ದಿ:25-11-2025 ರಂದು ಹಸ್ತಾಂತರಿಸಿ, ಸದರಿ ಕಾಮಗಾರಿಯನ್ನು ಶೀಘ್ರವಾಗಿ ಕೈಗೊಳ್ಳಲು ಕೋರಲಾಗಿದೆ.<br>3. ಸದರಿ ಗಿಡಗಳನ್ನು ಹರಾಜು ಮಾಡಲು ಪತ್ರಿಕಾ ಪ್ರಕಟಣೆ ಹೊರಡಿಸಲಾಗಿದ್ದು, ದಿನಾಂಕ:03-02-2026 ರಂದು ಹರಾಜು ಪ್ರಕ್ರಿಯೆ ಕೈಗೊಂಡು ಪ್ರಸ್ತುತ ಗಿಡಗಳ ಕಟಾವಣೆ ಪೂರ್ಣಗೊಳಿಸಿ ಸದರಿ ಜಾಗವನ್ನು ಲೋಕೋಪಯೋಗಿ ಇಲಾಖೆಗೆ ಹಸ್ತಾಂತರ ಮಾಡಲಾಗಿರುತ್ತದೆ.<br>4. ದಿ:15-12-2025 ರಂದು ಮಾನ್ಯ ಜವಳಿ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡುವಳಿಯಲ್ಲಿ ತಿಳಿಸಿರುವಂತೆ PWD ಕಲಬುರಗಿರವರವರು ಪ್ರಸ್ತುತ ಇರುವ 04 ಲೇನ್ ಜೋತೆಗೆ 02 ಹೆಚ್ಚುವರಿ ಲೇನ್ ನಿರ್ಮಿಸಲು ರೂ.5.50 ಕೋಟಿಗಳ ಅಂದಾಜು ಪಟ್ಟಿಯನ್ನು ಸಲ್ಲಿಸಿರುತ್ತಾರೆ.<br>5. 06 ಲೇನ್ ಮಾಡಲು ಪ್ರಸ್ತುತ ಇರುವಂತಹ ಭೂಮಿಯ ಜೋತೆಗೆ ಹೆಚ್ಚುವರಿಯಾಗಿ 4 ಎಕರೆ 33 ಗುಂಟೆ ಜಮೀನನ್ನು ಭೂಸ್ವಾಧೀನ ಪಡಿಸಿಕೊಳ್ಳುವ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ. |
| 2 | ಪಿ.ಎಮ್-ಮಿತ್ರ ಮೆಗಾ ಜವಳಿ ಪಾರ್ಕ್ ಯೋಜನಾ ಪ್ರದೇಶದಿಂದ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ:50 ರವರೆಗೂ ಎರಡು ಬದಿ ಚರಂಡಿಗಳ ನಿರ್ಮಾಣ | 3.50 | ಲೋಕೋಪಯೋಗಿ ಇಲಾಖೆ, ಕಲಬುರಗಿ ವಿಭಾಗ | 1. ಕಾರ್ಯ ನಿರ್ವಾಹಕ ಅಧಿಕಾರಿಗಳು ಲೋಕೋಪಯೋಗಿ ಇಲಾಖೆ, ಕಲಬುರಗಿ ಕಛೇರಿಯಿಂದ ಟೆಂಡರ್‌ನ್ನು ಅಂತಿಮಗೊಳಿಸಿ ದಿ:07-05-2025 ರಂದು ಕಾರ್ಯಾದೇಶ ನೀಡಲಾಗಿರುತ್ತದೆ.<br>2. ಭೂಮಿಯನ್ನು ಲೋಕೋಪಯೋಗಿ ಇಲಾಖೆ, ಕಲಬುರಗಿ ಇವರಿಗೆ ದಿ:25-11-2025 ರಂದು ಹಸ್ತಾಂತರಿಸಿ, ಸದರಿ ಕಾಮಗಾರಿಯನ್ನು ಶೀಘ್ರವಾಗಿ ಕೈಗೊಳ್ಳಲು ಕೋರಲಾಗಿದೆ.<br>3. ಮಾನ್ಯ ಜವಳಿ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ದಿ:15-12-2025 ರಂದು ನಡೆದ ಸಭೆಯಲ್ಲಿ ಪ್ರಸ್ತುತ ಪ್ರಸ್ತಾಪಿಸಿರುವ 4 ಲೇನ್ ಬದಲಾಗಿ 6 ಲೇನ್ ರಸ್ತೆ ಮಾಡಬೇಕಾಗಿರುವ ಪ್ರಯುಕ್ತ ಸದ್ಯಕ್ಕೆ ಕಾಮಗಾರಿ ಪ್ರಾರಂಭ ಮಾಡದಂತೆ ತಿಳಿಸಲಾಗಿರುತ್ತದೆ. |

...2

| ಕ್ರ.ಸಂ | ಕಾಮಗಾರಿಯ ಹೆಸರು | ನಿಗಧಿಪಡಿಸಿದ ಅನುದಾನ | ಅನುಷ್ಠಾನ ಇಲಾಖೆ | ಪ್ರಗತಿ |
|---|---|---|---|---|
| 3 | ಪಿಎಂ ಮಿತ್ರ ಮೆಗಾ ಜವಳಿ ಪಾರ್ಕ್‌ಗೆ 3.63 MLD ನೀರು ಹರಿಸಲು ಜೇವರ್ಗಿ ತಾಲೂಕಿನ ಮದ್ರಿ ಗ್ರಾಮದ ಬಳಿ ಆಣೆಕಟ್ಟು ನಿರ್ಮಿಸುವುದು. | 35.00 | ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ಕಲಬುರಗಿ ವಿಭಾಗ. | ದಿನಾಂಕ:02-02-2026 ರಂದು ಅಂತಿಮಗೊಂಡ ಬಿಡ್‌ದಾರರಿಗೆ ಕಾರ್ಯಾದೇಶ ನೀಡಲಾಗಿದ್ದು, ಕಾಮಗಾರಿ ಪ್ರಾರಂಭಿಸಲಾಗಿದ್ದು, ಪ್ರಗತಿಯಲ್ಲಿರುತ್ತದೆ. |
| 4 | ಮೆಗಾ ಜವಳಿ ಪಾರ್ಕಗೆ ಕೈಗಾರಿಕಾ ಉದ್ದೇಶಕ್ಕಾಗಿ 12.09 MLD ನೀರನ್ನು ನಂದಿಕೂರ ಗ್ರಾಮದ Sewage Treatment Plant(STP) ಯಿಂದ ನೀರು ಸರಬರಾಜು ಮಾಡುವುದು ಹಾಗೂ ಪಾರ್ಕ್‌ಗೆ 3.63 MLD ಕುಡಿಯುವ ನೀರು ಮತ್ತು ಗೃಹ ಬಳಕೆಗೆ ಭೀಮಾ ನದಿ ಮದ್ರಿ ಗ್ರಾಮದಿಂದ ಸರಬರಾಜು ಮಾಡಲು ಪೈಪ್‌ಲೈನ್ ಅಳವಡಿಸುವುದು. | 116.00 | ಕರ್ನಾಟಕ ನಗರ ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿ, ಕಲಬುರಗಿ ವಿಭಾಗ. | 1. ಸಚಿವ ಸಂಪುಟ ಸಭೆಯಲ್ಲಿ ರೂ.116.00 ಕೋಟಿಗಳಿಗೆ ಅನುಮೋದನೆ ನೀಡಲಾಗಿರುತ್ತದೆ. ಪ್ರಸ್ತುತ Reverse Osmosis, Ultra filtration ಅಳವಡಿಸಿಕೊಂಡು TDS below 300 Mg ಪೂರೈಸಲು ಪರಿಷ್ಕೃತ ರೂ.171.9545 ಕೋಟಿಗಳಿಗೆ ಅಂದಾಜು ಪಟ್ಟಿ ತಯಾರಿಸಲಾಗಿ, ಮಂಡಳಿಯ ತಾಂತ್ರಿಕ ಸಲಹಾ ಮತ್ತು ಟೆಂಡರ್ ಪರಿಶೀಲನಾ ಸಮಿತಿಯಲ್ಲಿ ಮಂಡಿಸಿ ಅನುಮೋದನೆ ಪಡೆದುಕೊಳ್ಳಲಾಗಿರುತ್ತದೆ.<br>2. ಕರ್ನಾಟಕ ನಗರ ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿ, ಕಲಬುರಗಿ ವಿಭಾಗದವರು ದಿನಾಂಕ:23-09-2025 ರ ಪತ್ರದಲ್ಲಿ, ಮಹಾನಗರ ಪಾಲಿಕೆ, ಕಲಬುರಗಿ ನೀರು ಶುದ್ಧೀಕರಣ ಘಟಕದಿಂದ 22.35 MLD ಸಂಸ್ಕರಿಸಿದ ನೀರನ್ನು ಜವಳಿ ಇಲಾಖೆಗೆ ಹಂಚಿಕೆ ಮಾಡಿಕೊಳ್ಳಲು ಕ್ರಮ ವಹಿಸಲು ಕೋರಿರುತ್ತಾರೆ. ಅದರಂತೆ, ಕೇಂದ್ರ ಕಛೇರಿಯಿಂದ ದಿ:07-11-2025 ರಂದು ಆಯುಕ್ತರು ಮಹಾನಗರ ಪಾಲಿಕೆ ಕಲಬುರಗಿರವರಿಗೆ ನೀರು ಹಂಚಿಕೆಗಾಗಿ ಪತ್ರ ಬರೆಯಲಾಗಿರುತ್ತದೆ.<br>3. ತೃತೀಯ ಶುದ್ಧೀಕರಣ ಘಟಕವನ್ನು ಸ್ಥಾಪಿಸಲು 3 ಎಕರೆ ಜಾಗವನ್ನು ಕೈಮಗ್ಗ ಮತ್ತು ಜವಳಿ ಇಲಾಖೆಗೆ ಹಂಚಿಕೆ ಮಾಡಲು ಮಾನ್ಯ ಆಯುಕ್ತರು, ಮಹಾನಗರ ಪಾಲಿಕೆ ಕಲಬುರಗಿರವರಿಗೆ ದಿ:12-06-2025 ಮತ್ತು ದಿ:21-01-2026 ರಂದು ಪತ್ರ ಬರೆಯಲಾಗಿರುತ್ತದೆ.<br>4. ಮಹಾನಗರ ಪಾಲಿಕೆಯಿಂದ ಜಾಗ ಮತ್ತು ನೀರು ಹಂಚಿಕೆ ಬಾಕಿ ಇರುತ್ತದೆ.<br>5. ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಎಂ.ಎಸ್.ಎಂ.ಇ ಮತ್ತು ಗಣಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯವರು ದಿ:28-01-2026 ರಂದು ನಡೆದ ಸಭೆಯಲ್ಲಿ ತುರ್ತಾಗಿ 03 ಎಕರೆ ಜಮೀನು ಮತ್ತು 22.35 ಎಮ್.ಎಲ್.ಡಿ ನೀರು ಹಂಚಿಕೆಗೆ ಕ್ರಮ ವಹಿಸಲು ಮಹಾನಗರ ಪಾಲಿಕೆ ಕಲಬುರಗಿರವರಿಗೆ ಸೂಚಿಸಲಾಗಿರುತ್ತದೆ. |

| ಕ್ರ.ಸಂ | ಕಾಮಗಾರಿಯ ಹೆಸರು | ನಿಗಧಿಪಡಿಸಿದ ಅನುದಾನ | ಅನುಷ್ಠಾನ ಇಲಾಖೆ | ಪ್ರಗತಿ |
|---|---|---|---|---|
| 5 | ಪಿಎಂ-ಮಿತ್ರ ಮೆಗಾ ಜವಳಿ ಪಾರ್ಕ್‌ಗೆ 180 ಮೆ.ವ್ಯಾ ವಿದ್ಯುತ್ ಸರಬರಾಜು ಕುರಿತಂತೆ ಪಾರ್ಕ್‌ನಲ್ಲಿ ಪವರ್ ಸ್ಟೇಷನ್ ಸ್ಥಾಪಿಸುವುದು 220 ಕೆವಿ 01 ಪವರ್ ಸ್ಟೇಷನ್ ಮತ್ತು 110ಕೆವಿ 04 ಪವರ್ ಸ್ಟೇಷನ್ | 229.28 | ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಕಲಬುರಗಿ | 1. ಸದರಿ KPTCL ಕಾರ್ಪೋರೇಟ್ ಕಛೇರಿಯಿಂದ ತಿಳಿಸಿರುವ ಸ್ಟೇಜ್-1 ಗೆ ರೂ.24296.72 ಲಕ್ಷ ಮತ್ತು ಸ್ಟೇಜ್-2 ಕಾಮಗಾರಿಗೆ ರೂ.9489.33 ಲಕ್ಷ ಹೀಗೆ ಒಟ್ಟು ರೂ.33786.05 ಲಕ್ಷಗಳಿಗೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.<br>2. ದಿನಾಂಕ:29-01-2026 ರಂದು ಕಾಮಗಾರಿಗಳಿಗೆ KPTCL ಕಾರ್ಪೋರೇಟ್ ಕಛೇರಿಯಿಂದ ಟೆಂಡರ್ ಆಹ್ವಾನಿಸಲಾಗಿರುತ್ತದೆ. |

ಅಪರ ನಿರ್ದೇಶಕರು (ಜವಳಿ ನೀತಿ),
ಕೈಮಗ್ಗ ಮತ್ತು ಜವಳಿ

ಅನುಬಂಧ-2

**MoU's signed between Govt. of Karnataka and Textile Industries at PM MITRA Park, Kalaburagi launched on Dt.28.03.2023**

| Sl. No. | Industry Name | Investment (Rs. in Crs.) |
|---|---|---|
| 1 | Shahi Exports Pvt. Ltd. | 500.00 |
| 2 | Suryavanshi Pvt Ltd. | 50.00 |
| 3 | Texport Industries Pvt. Ltd. | 200.00 |
| 4 | KPR Mills Ltd. | 200.00 |
| 5 | Gokaldas Exports Ltd. | 100.00 |
| 6 | Indian Designs | 100.00 |
| 7 | Himatsingka Siede Ltd. | 500.00 |
| 8 | Sonal Apparels Pvt Ltd. | 50.00 |
| | **Total** | **1700.00** |